ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 06.01.2026.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಡಿ ಎ ಎ ವಕೀಲರಿಂದಃ

ನಮ್ಮ ತಂದೆ ಲಕ್ಷ್ಮಣ ರವರಿಗೆ 06 ಜನ ಮಕ್ಕಳಿದ್ದು ಅವರಲ್ಲಿ 02 ಗಂಡು ಮಕ್ಕಳು 04 ಜನ ಹೆಣ್ಣು ಮಕ್ಕಳು. ನಾನು ಮತ್ತು ನನ್ನ ಸಹೋದರರು 2001 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ಗೌಡಸಂದ್ರ ಗ್ರಾಮದ ಸ.ನಂ.46 ರಲ್ಲಿ 01 ಗುಂಟೆ ಖರಾಬು ಸೇರಿ ಒಟ್ಟು 18 ಗುಂಟೆ ಜಮೀನು ಇರುತ್ತದೆ. ನನ್ನ ತಂದೆ ಮತ್ತು ಪ್ರತಿವಾಯ ತಂದೆ ಸಹೋದರರಾಗಿದ್ದು, ದಿಃ15.07.1968 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗದಲ್ಲಿ ದಕ್ಷಿಣದ ಅರ್ಧ ಭಾಗ ಪ್ರತಿವಾದಿಯ ತಂದೆಗೆ ಮತ್ತು ಉತ್ತರದ ಅರ್ಧ ಭಾಗ ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ. ಪ್ರತಿವಾದಿಯ ತಂದೆಯ ಭಾಗಕ್ಕೆ ಬಂದ ಭಾಗದಲ್ಲಿ ಒಂದು ಮನೆಯನ್ನು ಕಟ್ಟಿರುತ್ತಾರೆ. ನನ್ನ ತಂದೆಯ ಭಾಗಕ್ಕೆ ಬಂದ ಜಮೀನಿನಲ್ಲಿ ನಮ್ಮ ತಂದೆ ಜೀವಂತ ಇದ್ದಾಗಲೇ ಒಂದು ಮನೆಯನ್ನು ನಿರ್ಮಿಸಿರುತ್ತಾರೆ.

2. ಪ್ರತಿವಾದಿ ಸೀತಾರಮಯ್ಯ ರವರ ಭಾಗಕ್ಕೆ ಹೋಗಿರುವ 08 ವರೆ ಗುಂಟೆ ಜಾಗದಲ್ಲಿ ರೇಷ್ಮೆ ಹುಳು ಸಾಕಾಣೆ ಮಾಡುವ ಮನೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಭಾಗಕ್ಕೆ ಬಂದ ಸ್ವತ್ತಿನಲ್ಲಿ ರೇಷ್ಮೆ ಹುಳು ಸಾಕಾಣಿಕೆ ಮನೆ ಇದೆ ಎಂದರೆ ಸಾಕ್ಷಿಯು ನನ್ನ ರೇಷ್ಮೆ ಹುಳು ಸಾಕಾಣೆ ಮಾಡುವ ಮನೆ ಇದೆ ಎಂದು ಹೇಳುತ್ತಾರೆ. ಸದರಿ ರೇಷ್ಮೇ ಹುಳು ಸಾಕಾಣೆ ಮನೆಗೆ ವಿದ್ಯುತ್ ಸೌಲಭ್ಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಮನೆ ಮತ್ತು ಪ್ರತಿವಾದಿ ತಂದೆ ಕಟ್ಟಿರುವ ಮನೆ ಮದ್ಯೆ ರಸ್ತೆ ಇರುವುದಿಲ್ಲ. ನಮ್ಮ ಮನೆಯ ಮುಖ್ಯ ಭಾಗಿಲಿಗೆ ರಸ್ತೆಯು ಸುಮಾರು 100 ಅಡಿ ದೂರದಲ್ಲಿ ಇರುತ್ತದೆ. ನಾನು ನಮ್ಮ ಮನೆಯ ಉತ್ತರಕ್ಕೆ ಇರುವ ಜಮೀನಿನ ಮೂಲಕ ಓಡಾಡುತ್ತೇನೆ. ಪ್ರತಿವಾದಿ ಯಾವ ರಸ್ತೆಯಲ್ಲಿ ತಮ್ಮ ಮನೆಗೆ ಓಡಾಡುತ್ತಾರೆಂದು ನನಗೆ ಗೊತ್ತಿಲ್ಲ.

3. ಪ್ರತಿವಾದಿ ತಂದೆ ತಮ್ಮ ಭಾಗಕ್ಕೆ ಬಂದ ಪೂರ್ವ ದಿಕ್ಕಿನ 04 ಗುಂಟೆ ಜಮೀನನ್ನು ನನ್ನ ತಂದೆಗೆ ದಿಃ26.03.1971 ರಲ್ಲಿ ನಿ.ಪಿ.9 ನೋಂದಾಯಿತವಲ್ಲದ ಕ್ರಯದ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಕ್ರಯ ಪತ್ರ ಆದ ನಂತರ 04 ಗುಂಟೆ ಜಮೀನಿಗೆ ಖಾತೆ ನನ್ನ ತಂದೆ ಹೆಸರಿಗೆ ಬದಲಾವಣೆ ಆಗಿರುತ್ತದೆ. ನನ್ನ ತಂದೆ ಕ್ರಯಕ್ಕೆ ಖರೀದಿಸಿದ 04 ಗುಂಟೆ ಮತ್ತು ಅವರ ಭಾಗಕ್ಕೆ ಬಂದ ಸ್ವತ್ತು ಸೇರಿ ಒಟ್ಟು 12½ ಗುಂಟೆ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆ. ನನ್ನ ತಂದೆ ಖರೀದಿಸಿದ 04 ಗುಂಟೆ ಜಮೀನಿಗೆ ಚಕ್ಕುಬಂದಿ

ಪೂರ್ವಕ್ಕೆಃ ಸ.ನಂ.49/2 ರ ಜಮೀನು.

ಪಶ್ಚಿಮಕೆಃ ಪ್ರತಿವಾದಿ ತಂದೆಯ ಜಮೀನು.

ಉತ್ತರಕ್ಕೆಃ ಸ.ನಂ.46/1 ರ ನಮ್ಮದೇ ಜಮೀನು.

ದಕ್ಷಿಣಕ್ಕೆಃ ಸ.ನಂ.47 ರ ಜಮೀನು ಇರುತ್ತದೆ.

4. ನಿ.ಪಿ.9 ನ್ನು ಯಾರು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಿ.ಪಿ.9 ರಲ್ಲಿರುವ ಸಹಿ ಪ್ರತಿವಾದಿಯ ತಂದೆ ಸಹಿ ಅಲ್ಲ ಎಂದರೆ ಗೊತ್ತಿಲ್ಲ. ನಿ.ಪಿ.9 ನ್ನು ನನ್ನ ತಂದೆ ಸೃಷ್ಟಿ ಮಾಡಿದ ದಾಖಲೆ ಆಗಿರುತ್ತದೆಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಅವರ ಸೊಸೆಯಾದ ಯಶೋದಮ್ಮ ರವರ ಮನೆಯಲ್ಲಿ ಮರಣ ಹೊಂದುವ ಕಾಲದಲ್ಲಿ ಇದ್ದರು ಎಂದರೆ ಸರಿ. ಪ್ರತಿವಾದಿ ತಂದೆ ಮರಣ ಹೊಂದುವ ಕಾಲಕ್ಕೆ ಹಲವಾರು ಕಾಯಿಲೆಗಳು ಇದ್ದವು ಎಂದರೆ ಸರಿ. ಪ್ರತಿವಾದಿಯ ತಂದೆ ಮೃತರಾಗಿ ಸುಮಾರು 4-5 ವರ್ಷಗಳಾಗಿರಬಹುದು. ನನ್ನ ತಂದೆ ಮತ್ತು ಪ್ರತಿವಾದಿ ತಂದೆಯ ನಡುವೆ ಸುಮಾರು 03 ಸಿವಿಲ್ ದಾವೆಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಪ್ರತಿವಾದಿಯ ತಂದೆ ಜಮೀನನ್ನು ನ್ಯಾಯಾಲಯದಲ್ಲಿ ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ಭಾಗಕ್ಕೆ ಬಂದ ಜಮೀನನ್ನು ಪ್ರತಿವಾದಿ ತಂದೆ ಮತ್ತು ಅವರ ಮಕ್ಕಳು ವಿಭಾಗ ಮಾಡಿಕೊಂಡಿರುವ ಬಗ್ಗೆ ಗೊತ್ತಿಲ್ಲ.

<u>ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.</u>

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.